ಫ್ಯಾಕ್ಸ್: 08282–256262
ಇ–ಮೇಲ್: drsyndicateku@gmail.com
ವೆಬ್‌ಸೈಟ್: www.kuvempu.ac.in

# ಕುವೆಂಪು ವಿಶ್ವವಿದ್ಯಾಲಯ

ವಿಶ್ವವಿದ್ಯಾಲಯ ಕಾರ್ಯಾಲಯ, ಜ್ಞಾನ ಸಹ್ಯಾದ್ರಿ– 577 451

ಸಂಖ್ಯೆ: ಕುವಿ:ಯುಎಟಿ–1:11B: 553 :2023–24 ದಿನಾಂಕ:19–01–2024
24

## ಸುತ್ತೋಲೆ

ವಿಷಯ : ಪ್ರಾಂಶುಪಾಲರ ಜೇಷ್ಠತಾ ಪಟ್ಟಿ ಸಿದ್ಧಪಡಿಸಲು ಮಾಹಿತಿ ನೀಡುವ ಕುರಿತು.

---

ವಿಶ್ವವಿದ್ಯಾಲಯದ ವಿವಿಧ ಪ್ರಾಧಿಕಾರಗಳ ಪದನಿಮಿತ್ತ ಸದಸ್ಯತ್ವಕ್ಕೆ ಕಾಲೇಜು ಪ್ರಾಂಶುಪಾಲರುಗಳನ್ನು ನಾಮನಿರ್ದೇಶನ ಮಾಡುವ ಸಂಬಂಧ ಪ್ರಾಂಶುಪಾಲರುಗಳ ಸೇವಾ ವಿವರಗಳನ್ನು ದಿನಾಂಕ:01–01–2024ಕ್ಕೆ ಇದ್ದಂತೆ ಕ್ರೋಢೀಕರಿಸಲಾಗುತ್ತಿದೆ. ಆದ್ದರಿಂದ, ಈ ಸುತ್ತೋಲೆಗೆ ಲಗತ್ತಿಸಿರುವ ನಿಗದಿತ ನಮೂನೆ ಅನುಬಂಧ–1 ರಲ್ಲಿ ಮಾಹಿತಿಯನ್ನು ಸಂಬಂಧಿಸಿದ ದೃಢೀಕೃತ ದಾಖಲೆಗಳೊಂದಿಗೆ ದಿನಾಂಕ:12–02–2024 ರೊಳಗೆ ವಿಶ್ವವಿದ್ಯಾಲಯಕ್ಕೆ ಕಳುಹಿಸಿಕೊಡಲು ತಿಳಿಸಲಾಗಿದೆ.

ನಿಗದಿತ ದಿನಾಂಕದೊಳಗಾಗಿ ಮಾಹಿತಿಯು ಬಾರದೇ ಇದ್ದಲ್ಲಿ ಜೇಷ್ಠತಾ ಪಟ್ಟಿಯಲ್ಲಿ ತಮ್ಮ ಹೆಸರು ಸೇರ್ಪಡೆಯಾಗುವುದಿಲ್ಲ.

ವಿವರಣೆ ನೀಡುವ ನಮೂನೆಯನ್ನು ಸಂಪೂರ್ಣವಾಗಿ ಪರಿಶೀಲಿಸಿ, ಯು.ಜಿ.ಸಿ. ನಿಯಮಾನುಸಾರ ಅಗತ್ಯವಿರುವ ಈ ಕೆಳಗೆ ಹೇಳಲಾದ ದಾಖಲಾತಿಗಳ ದೃಢೀಕೃತ ಪ್ರತಿಗಳನ್ನು ಅವಶ್ಯಕವಾಗಿ ಲಗತ್ತಿಸಬೇಕು. ಪ್ರಾಂಶುಪಾಲರ ಬದಲಾವಣೆಯಾದಾಗ (ನಿವೃತ್ತಿ ಅಥವಾ ವರ್ಗಾವಣೆಯಾದಾಗ) ಕೂಡಲೇ ವಿಶ್ವವಿದ್ಯಾಲಯದ ಗಮನಕ್ಕೆ ತರಬೇಕಾಗಿ ತಿಳಿಸಲಾಗಿದೆ.

1. Ph.D Degree Certificate
2. Proof for Experieance
3. Proof regarding 10 research publications in peer-reviewed or UGC listed journals.
4. Supported Document to minimum 110 Research Score

Digitally Signed by Snehal Sudhakar Lokhande
Date: 22-01-2024 19:31:32
Reason: Approved

ಮಾಹಿತಿಯನ್ನು ಸಲ್ಲಿಸುವ ಲಕೋಟೆಯ ಮೇಲೆ ***ಪ್ರಾಂಶುಪಾಲರ ಜೇಷ್ಠತಾ ಪಟ್ಟಿ* –2024** ಎಂದು ನಮೂದಿಸಿ, ***ಕುಲಸಚಿವರು, ಕುವೆಂಪು ವಿಶ್ವವಿದ್ಯಾಲಯ, ಜ್ಞಾನ ಸಹ್ಯಾದ್ರಿ, ಶಂಕರಘಟ್ಟ*** – 577 451 ಈ ವಿಳಾಸಕ್ಕೆ ಕಳುಹಿಸಲು ಸೂಚಿಸಿದೆ.

**ಕುಲಸಚಿವರು**

**ಗೆ,**
ವಿಶ್ವವಿದ್ಯಾಲಯದ ವ್ಯಾಪ್ತಿಗೊಳಪಡುವ ಎಲ್ಲಾ ಸಂಯೋಜಿತ / ಘಟಕ / ಸರ್ಕಾರಿ / ಅನುದಾನ / ಅನುದಾನರಹಿತ / ನೇರ ಆಡಳಿತಕ್ಕೊಳಪಟ್ಟ ಕಾಲೇಜುಗಳ ಪ್ರಾಂಶುಪಾಲರುಗಳಿಗೆ.

**ಪ್ರತಿಗಳು:**
1) ಆಪ್ತ ಸಹಾಯಕರು: ಕುಲಪತಿಗಳು/ಕುಲಸಚಿವರು/ ಕುಲಸಚಿವರು(ಪ)/ ಹಣಕಾಸು ಅಧಿಕಾರಿಗಳು.
ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ.
2) ಕಛೇರಿ ಪ್ರತಿ.

UAT-1:PRINCIPAL SENIORITY-

Scanned with OKEN Scanner

ಅನುಬಂಧ-1

## ಕುವೆಂಪು ವಿಶ್ವವಿದ್ಯಾಲಯದ ಸಂಯೋಜಿತ/ಘಟಕ/ಸರ್ಕಾರಿ/ಅನುದಾನಿತ/ಅನುದಾನರಹಿತ/ ನೇರ ಆಡಳಿತಕ್ಕೊಳಪಟ್ಟ ಕಾಲೇಜುಗಳ ಪ್ರಾಂಶುಪಾಲರುಗಳ ವಿವರಗಳು (ದಿನಾಂಕ:01-01-2024 ಕ್ಕೆ ಇದ್ದಂತೆ).

| | | | | | | | |
|---|---|---|---|---|---|---|---|
| 01. | ಕಾಲೇಜಿನ ಹೆಸರು ಮತ್ತು ವಿಳಾಸ | | | | | | |
| 02. | ಕಾಲೇಜು ಸ್ಥಾಪಿತವಾದ ವರ್ಷ | | | | | | |
| 03. | ಕಾಲೇಜಿನ ವಿವರ | ಸಂಯೋಜಿತ | ಘಟಕ | ಸರ್ಕಾರಿ | ಅನುದಾನ | ಅನುದಾನರಹಿತ | ನೇರ ಆಡಳಿತ |
| | | | | | | | |
| 04. | ಪ್ರಾಂಶುಪಾಲರ ಹೆಸರು | | | | | | |
| 05. | ಲಿಂಗ | ಪುರುಷ: ☐ | | | | ಮಹಿಳೆ: ☐ | |
| 06. | ಹುಟ್ಟಿದ ದಿನಾಂಕ (ದೃಢೀಕರಿಸಿದ ಎಸ್.ಎಸ್.ಎಲ್.ಸಿ. ಅಂಕಪಟ್ಟಿ/ಟಿ.ಸಿ ಪ್ರತಿ ಲಗತ್ತಿಸುವುದು) | | | | | | |
| 07. | ಅಧ್ಯಾಪಕರಾಗಿ ಖಾಯಂ ಸೇವೆಗೆ ಸೇರಿದ ದಿನಾಂಕ ಹಾಗೂ ಒಟ್ಟು ಬೋಧನಾನುಭವ (ನೇಮಕಾತಿ ಆದೇಶ ದೃಢೀಕರಿಸಿ ಲಗತ್ತಿಸುವುದು) | ನೇಮಕಾತಿ ದಿನಾಂಕ | | | | | |
| | | ಒಟ್ಟು ಬೋಧನಾನುಭವ | | | | | |
| 08 | ಈ ಹಿಂದೆ ಕುವೆಂಪು ವಿಶ್ವವಿದ್ಯಾಲಯದಲ್ಲಿ ಸಿಂಡಿಕೇಟ್ ಹಾಗೂ ವಿದ್ಯಾವಿಷಯಕ ಪರಿಷತ್ ಸದಸ್ಯರಾಗಿ ಕಾರ್ಯನಿರ್ವಹಿಸಿದ್ದಲ್ಲಿ ಸದರಿ ಅವಧಿಯ ಮಾಹಿತಿ ನೀಡುವುದು.(ಪ್ರತಿ ಲಗತ್ತಿಸುವುದು) | | | | | | |
| 09. | ಈ ಹಿಂದೆ ಪ್ರಾಂಶುಪಾಲರಾಗಿ ಕೆಲಸ ನಿರ್ವಹಿಸಿದ ವಿವರ (ದೃಢೀಕೃತ ದಾಖಲಾತಿ ಲಗತ್ತಿಸುವುದು.) | | | | | | |
| 10. | ಪ್ರಸಕ್ತ ಕಾಲೇಜಿನಲ್ಲಿ ಖಾಯಂ ಪ್ರಾಂಶುಪಾಲರಾಗಿ ನೇಮಕಗೊಂಡ ಆದೇಶದ ದೃಢೀಕೃತ ಪ್ರತಿ ಲಗತ್ತಿಸುವುದು | | | | | | |
| 11. | ಪ್ರಾಂಶುಪಾಲರಾಗಿ ಸೇವೆ ಸಲ್ಲಿಸಿರುವ ಒಟ್ಟು ಅವಧಿ | ವರ್ಷ | | ತಿಂಗಳು | | ದಿನ | |
| | | | | | | | |
| 12. | ಕುವೆಂಪು ವಿಶ್ವವಿದ್ಯಾಲಯದ ಕಾಲೇಜು ಅಭಿವೃದ್ಧಿ ಪರಿಷತ್ ಅನುಮೋದಿಸಿರುವ ಪ್ರಾಂಶುಪಾಲರ ನೇಮಕಾತಿಯ (ಆದೇಶದ ಪ್ರತಿಯನ್ನು ಕಡ್ಡಾಯವಾಗಿ ಲಗತ್ತಿಸುವುದು.) | | | | | | |
| 13. | ಸ್ಥಿರ ದೂರವಾಣಿ ಸಂಖ್ಯೆ (ಎಸ್.ಟಿ.ಡಿ. ಕೋಡ್ ಸಹಿತ ಕಡ್ಡಾಯವಾಗಿ ನಮೂದಿಸತಕ್ಕದ್ದು) | ಕಛೇರಿ: | | | | ಮನೆ: | |
| 14. | ಮೊಬೈಲ್ | | | | | | |
| 15. | ಇ-ಮೇಲ್ | | | | | | |

ದಿನಾಂಕ:

ಸ್ಥಳ:

ಪ್ರಾಂಶುಪಾಲರ ಸಹಿ ಹಾಗೂ ಮೊಹರು

ಪು.ತಿ.ನೊ

Scanned with OKEN Scanner

**ವಿಶೇಷ ಸೂಚನೆಗಳು:**

1) ಕೆಲವು ಕಾಲೇಜುಗಳು ಸ್ಥಾಪನೆ ಬಗ್ಗೆ ಬೇರೆ ಬೇರೆ ದಿನಾಂಕಗಳನ್ನು ನೀಡುತ್ತಿದ್ದು, ಆಡಳಿತಾತ್ಮಕವಾಗಿ ಕೆಲವು ಸಮಸ್ಯೆಗಳುಂಟಾಗುತ್ತಿರುವುದರಿಂದ, ಸ್ಥಾಪನೆಯಾದ ವರ್ಷದಲ್ಲಿ ಪ್ರಥಮವಾಗಿ ನವೀನ ಸಂಯೋಜನೆ ಪಡೆದ ದಿನಾಂಕವನ್ನೇ ಸ್ಥಾಪಿತವಾದ ದಿನಾಂಕವೆಂದು ನೀಡುವುದು. ಮುಂದುವರಿಕೆ/ನವೀನ ಸಂಯೋಜನೆಯನ್ನು ರದ್ದುಪಡಿಸಿ, ನಂತರ ಪುನಃ ನವೀನ/ ಮುಂದುವರಿಕೆ ಸಂಯೋಜನೆ ನೀಡಿದ್ದರೆ ವಿವರಗಳನ್ನು ನೀಡುವುದು.

2) ಸಂಯೋಜನೆಗೊಂಡಿರುವ ಖಾಸಗಿ ಕಾಲೇಜುಗಳ ಪ್ರಾಂಶುಪಾಲರು ತಾವು ಪ್ರಾಂಶುಪಾಲರಾಗಿ ಕರ್ತವ್ಯಕ್ಕೆ ವರದಿ ಮಾಡಿಕೊಂಡಿರುವ ಬಗ್ಗೆ ಆಡಳಿತ ಮಂಡಳಿಯು ನೀಡಿರುವ ನೇಮಕಾತಿ ಆದೇಶದ ದೃಢೀಕೃತ ಪ್ರತಿ ಹಾಗೂ ಸದರಿ ನೇಮಕಾತಿ ಆದೇಶವನ್ನು ಆಯುಕ್ತರು, ಕಾಲೇಜು ಶಿಕ್ಷಣ ಇಲಾಖೆ, ಬೆಂಗಳೂರು – ಇವರು ಅನುಮೋದಿಸಿ ಆಯಾ ಜಿಲ್ಲಾ ಪ್ರಾದೇಶಿಕ ಜಂಟಿ ನಿರ್ದೇಶಕರಿಂದ ಅನುಮೋದನೆಗೊಂಡಿರುವ ಬಗ್ಗೆ ಬಂದಿರುವ ಸರ್ಕಾರಿ ಆದೇಶ ಅಥವಾ ವಿಶ್ವವಿದ್ಯಾಲಯದಿಂದ ನೇಮಕಾತಿ ಅನುಮೋದನೆಗೊಂಡಿರುವ ಬಗ್ಗೆ ಆದೇಶದ ಜೆರಾಕ್ಸ್ ಪ್ರತಿಯನ್ನು ದೃಢೀಕರಣದೊಂದಿಗೆ ಲಗತ್ತಿಸಬೇಕು.

ಅದೇ ರೀತಿ ಸರ್ಕಾರಿ ಕಾಲೇಜುಗಳ ಪ್ರಾಂಶುಪಾಲರು– ಆಯುಕ್ತರು, ಕಾಲೇಜು ಶಿಕ್ಷಣ ಇಲಾಖೆ, ಬೆಂಗಳೂರು – ಇವರಿಂದ ತಾವು ಪ್ರಾಂಶುಪಾಲರಾಗಿ ನೇಮಕಗೊಂಡ: ವರ್ಗಾವಣೆಗೊಂಡ ಬಗೆಗಿನ ಸರ್ಕಾರಿ ಆದೇಶದ ದೃಢೀಕೃತ ಪ್ರತಿ ಹಾಗೂ ಆಯಾ ಪ್ರಾದೇಶಿಕ ಜಂಟಿ ನಿರ್ದೇಶಕರಿಂದ ಅನುಮೋದನೆಗೊಂಡ ಸರ್ಕಾರಿ ಆದೇಶದ ದೃಢೀಕೃತ ಪ್ರತಿಯನ್ನು ಲಗತ್ತಿಸಬೇಕು.

3) ದೃಢೀಕೃತ ದಾಖಲಾತಿಗಳ ಪ್ರತಿಗಳನ್ನು ಒದಗಿಸದಿದ್ದಲ್ಲಿ ಅಪೂರ್ಣ ಮಾಹಿತಿ ಎಂದು ಪರಿಗಣಿಸಿ ಅರ್ಜಿಯನ್ನು ತಿರಸ್ಕರಿಸಲಾಗುವುದು.

Scanned with OKEN Scanner